

# ನಾಜಿಗಳ ವಿರುದ್ಧ ಹೋರಾಡಿ ಮಡಿದವರ ಸ್ಮಾರಕ

## ಮೆಮೊರಿಯಲ್ ಡೆ ಲಾ ಫ್ರಾನ್ಸ್ ಕಾಂಬಟ್ಟಾಂಟೆ

ವಿಶ್ವ ಯುದ್ಧದಲ್ಲಿ ಮಡಿದ ವೀರರೊಂದಿಗೆ, ದೇಶದೊಳಗೆ ಜರ್ಮನ್ ಆಕ್ರಮಣ ಪ್ರತಿರೋಧಿಸಿ ಮಡಿದ ನಾಗರಿಕ ಯೋಧರ ಗೌರವಾರ್ಥ ನಿರ್ಮಿಸಿದ ಸ್ಮಾರಕ ಫ್ರಾನ್ಸ್‌ನ ‘ಮೆಮೊರಿಯಲ್ ಡೆ ಲಾ ಫ್ರಾನ್ಸ್ ಕಾಂಬಟ್ಟಾಂಟೆ’.

■ ಕೋಟೂರ್ ಸಂಪತ್

ದ್ವಿತೀಯ ವಿಶ್ವ ಮಹಾಸಮರದಲ್ಲಿ ಸೇವೆ ಸಲ್ಲಿಸುವಾಗ ಮಡಿದ ಫ್ರಾನ್ಸ್ ಸೇನಾ ಸದಸ್ಯರ ಮತ್ತು ದೇಶದೊಳಗೇ ಇದ್ದು ನಾಜಿಗಳ ಅಟ್ಟಹಾಸವನ್ನು ವಿರೋಧಿಸಿ ಹೋರಾಡಿ ಸಾವನ್ನಪ್ಪಿದ ಸಮರ ವೀರರ ಸ್ಮರಣಾರ್ಥ ನಿರ್ಮಿಸಿದ ಸ್ಮಾರಕವೇ ‘ಮೆಮೊರಿಯಲ್ ಡೆ ಲಾ ಫ್ರಾನ್ಸ್ ಕಾಂಬಟ್ಟಾಂಟೆ’ (ಫ್ರಾನ್ಸ್ ಯುದ್ಧವೀರರ ಸ್ಮಾರಕ).

ಫ್ರಾನ್ಸ್ ದೇಶದ ರಾಜಧಾನಿ ಪ್ಯಾರಿಸ್‌ನ ಪಶ್ಚಿಮ ಭಾಗದಲ್ಲಿನ ಉಪನಗರ ಸುರೇಸ್‌ನೆಸ್‌ನಲ್ಲಿ ಜೂನ್ 18, 1960ರಲ್ಲಿ ಲೋಕಾರ್ಪಣೆಯಾದ ಈ ಸ್ಮಾರಕ ಫ್ರಾನ್ಸ್ ದೇಶದಲ್ಲೇ ಅತ್ಯಂತ ಪ್ರಮುಖವಾದದ್ದು. ಹತ್ತೊಂಬತ್ತನೇ ಶತಮಾನದ ಮಧ್ಯದಲ್ಲಿ ಕಟ್ಟಲಾದ ‘ಫೋರ್ಟ್ ಮಾಂಟ್ ವೆಲೇರಿಯನ್’ ಹೆಸರಿನ ಕೋಟೆಯ ಕೆಳಭಾಗದಲ್ಲಿ ಈ ಯುದ್ಧ ಸ್ಮಾರಕ ಎದ್ದು ನಿಂತಿದೆ. ಫ್ರಾನ್ಸ್–ಜರ್ಮನಿ ಗಡಿ ಭಾಗದ ಬೆಟ್ಟಗಳಿಂದ ತರಲಾದ ಗುಲಾಬಿ ಮರಳುಗಲ್ಲು (ಪಿಂಕ್ ಸ್ಯಾಂಡ್‌ಸ್ಟೋನ್) ಬಳಸಿ 490 ಅಡಿ ಅಡ್ಡಗಲದ ಭಾರಿ ಗೋಡೆ ನಿರ್ಮಾಣ ಮಾಡಲಾಗಿದೆ.

ಇದರ ಮಧ್ಯ ಭಾಗದಲ್ಲಿ 39 ಅಡಿ ಎತ್ತರದ ಎರಡು ಅಡ್ಡ ಕ್ರಾಸ್‌ಗಳಿರುವ ಲೋರೆನ್ ಮಾದರಿಯ ಶಿಲುಬೆಯನ್ನು ಹೋಲುವ ಕಲ್ಲು ಶಿಲುಬೆ ನಿಲ್ಲಿಸಲಾಗಿದೆ. ಇದರ ಎಡ ಬಲಕ್ಕೆ, ಹೋರಾಟದಲ್ಲಿ ಭಾಗವಹಿಸಿದವರನ್ನು, ಸ್ಥಳಗಳನ್ನು ಸಾಂಕೇತಿಕವಾಗಿ ಪ್ರತಿನಿಧಿಸುವ ಹದಿನಾರು ಕಂಚಿನ ಉಬ್ಬು ಶಿಲ್ಪಗಳನ್ನು ಜೋಡಣೆ ಮಾಡಲಾಗಿದೆ. ಮೊದಲಿಗೆ, ಈ ಮಾಂಟ್ ವೆಲೇರಿಯನ್ ಕೋಟೆಯೊಳಗೆ ನವೆಂಬರ್ 11, 1945ರಂದು ಹದಿನೈದು ಫ್ರೆಂಚ್ ಸಮರ ವೀರರಿಗೆ ಸಮಾಧಿ ನಿರ್ಮಿಸಲಾಗಿತ್ತು. ನಂತರದ ಯೋಜನೆಯಲ್ಲಿ ಈಗ ಕಾಣುವಂತಹ ಪೂರ್ಣ ಪ್ರಮಾಣದ ಸ್ಮಾರಕ ತಲೆ ಎದ್ದಿತು.

ದ್ವಿತೀಯ ವಿಶ್ವ ಮಹಾಯುದ್ಧ ಸಮಯದಲ್ಲಿ ಜರ್ಮನ್ನರು ಈ ಕೋಟೆ ಪ್ರದೇಶವನ್ನು ವಶಪಡಿಸಿಕೊಂಡು ದಬ್ಬಾಳಿಕೆ ಮೆರೆಯುತ್ತ



ಪ್ರತಿರೋಧಿಸಿದ ಫ್ರೆಂಚ್ ನಾಗರಿಕರನ್ನು, ಒತ್ತೆಯಾಳುಗಳನ್ನು ಮರಣದಂಡನೆಗೆ ಗುರಿಯಾಗಿಸುತ್ತಿದ್ದರು. ಈ ರೀತಿ ಸಾವಿರಾರು ಮಂದಿಯನ್ನು ಗುಂಡಿಟ್ಟು ಕೊಂದು ಪ್ಯಾರಿಸ್‌ನ ಸ್ಮಶಾನಗಳಲ್ಲಿ ಎಸೆಯಲಾಯಿತು. 1945ರಲ್ಲಿ ಫ್ರೆಂಚ್ ಸೇನಾ ಅಧಿಕಾರಿಯಾಗಿದ್ದ ಚಾರ್ಲ್ಸ್ ಜೋಸೆಫ್ ಮಾರಿ ಈ ಸ್ಥಳಕ್ಕೆ ಭೇಟಿ ನೀಡಿ, ಪ್ರತಿರೋಧ ತೋರಿ ಶೌರ್ಯ ಮೆರೆದು ಜೀವತೆತ್ತ ತನ್ನ ಫ್ರೆಂಚ್ ನಾಗರಿಕರಿಗಾಗಿ ಅಲ್ಲೊಂದು ವಿಶ್ವಕ್ಕೆ ಕಾಣುವಂಥ ಸ್ಮಾರಕ ಒಂದನ್ನು ನಿರ್ಮಿಸಬೇಕೆಂದು ದೃಢ ನಿಶ್ಚಯ ತಳೆದ.

ಈ ಸ್ಮಾರಕವು ದೂರದ ವಿಶ್ವ ಯುದ್ಧದಲ್ಲಿ ಮಡಿದ ವೀರರಿಗಿಂತ ದೇಶದೊಳಗೇ ಇದ್ದು ಜರ್ಮನ್ ಆಕ್ರಮಣಕ್ಕೆ ಪ್ರತಿರೋಧ ತೋರುತ್ತ ಹೋರಾಡಿ ಮಡಿದ, ಕ್ರಾಂತಿಕಾರರಲ್ಲದ, ನಾಗರಿಕ ಯೋಧರಿಗೆ ಗೌರವಾರ್ಥ ಸಂಕೇತವೆಂದು ದಾಖಲಿಸಲಾಯಿತು.

ಜೂನ್ 17, 1960ರಂದು ಫ್ರೆಂಚ್ ಸೇನಾ ಪಡೆಯ ಮುಖ್ಯಸ್ಥರು ಚರ್ಚಿಸಿ ನಿರ್ಣಯಿಸಿದ, ದೇಶಕ್ಕಾಗಿ ಮಡಿದ ಯೋಧರ, ಪ್ರತಿರೋಧಿಸಿ ಹೋರಾಡಿದ ನಾಗರಿಕರ ಶವಪೆಟ್ಟಿಗೆಗಳನ್ನು ವಿವಿಧ ಸ್ಥಳಗಳಿಂದ ತೆಗೆಯಲ್ಪಟ್ಟು ಈ ಸ್ಮಾರಕದಲ್ಲಿ ಪುನಃ ಸಮಾಧಿ ಮಾಡಲಾಯಿತು. ಮರುದಿನವೇ ಅಂದರೆ, ಜೂನ್ 18, 1960ರಂದು ‘ಮೆಮೊರಿಯಲ್ ಡೆ ಲಾ ಫ್ರಾನ್ಸ್ ಕಾಂಬಟ್ಟಾಂಟೆ’ ಸ್ಮಾರಕವನ್ನು ಸೇನಾ ಅಧಿಕಾರಿ ಚಾರ್ಲ್ಸ್ ಆನ್‌ಡ್ರೆ ಲೋಕಾರ್ಪಣೆ ಮಾಡಿದರು.

ಚಿತ್ರಕೃಪೆ: ವಿಕಿಕಾಮನ್ಸ್